All India Radio: Bangalore
National Bulletin In Kannada
04.08.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

- ಐದು ದಿನಗಳ ಅಧಿಕೃತ ಭಾರತ ಭೇಟಿಗಾಗಿ ಇಂದು ದೆಹಲಿಗೆ ಆಗಮಿಸಲಿರುವ ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಆರ್.ಮಾರ್ಕೋಸ್
- ನವದೆಹಲಿಯಲ್ಲಿ ಇಂದು ಮೊಟ್ಟ ಮೊದಲ ಬಿಮ್‌ಸ್ಟೆಕ್ ಸಾಂಪ್ರದಾಯಿಕ ಸಂಗೀತ ಉತ್ಸವ
- ಭಾರತದ ಸ್ಮಾರ್ಟ್‌ಫೋನ್ ರಫ್ತು ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ದಾಖಲೆ ಮಟ್ಟದ ಏರಿಕೆ
- ರೆಪೊ ದರ ತೀರ್ಮಾನಿಸಲು ಇಂದಿನಿಂದ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ಆರಂಭ
- ಕೊಸನೋವ್ ಸ್ಮಾರಣಾರ್ಥ ಅಥ್ಲಿಟಕ್ ಕ್ರೀಡಾಕೂಟ ಪುರುಷರ ತ್ರಿಪಲ್ ಜಂಪ್‌ನಲ್ಲಿ ಭಾರತದ ಅಬ್ದುಲ್ಲಾ ಅಬುಬಕ್ಕರ್‌ಗೆ ಪ್ರಶಸ್ತಿ

<><><><>

ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಆರ್. ಮಾರ್ಕೋಸ್ ಜೂನಿಯರ್ ಅವರು ಐದು ದಿನಗಳ ಭಾರತ ಭೇಟಿಗಾಗಿ ಇಂದು ಮಧ್ಯಾಹ್ನ ನವದೆಹಲಿಗೆ ಆಗಮಿಸಲಿದ್ದಾರೆ. ಅವರ ಜೊತೆ ಮೊದಲ ಮಹಿಳೆ ಲೂಯಿಸ್ ಅರೆನೆಟಾ, ಸಂಪುಟ ಸಚಿವರು, ಇತರೆ ಗಣ್ಯರು, ಹಿರಿಯ ಅಧಿಕಾರಿಗಳು ಹಾಗೂ ವ್ಯಾಪಾರ ವಲಯದ ಪ್ರತಿನಿಧಿಗಳನ್ನು ಒಳಗೊಂಡಿರುವ ಉನ್ನತ ಮಟ್ಟದ ನಿಯೋಗ ಸಹ ಆಗಮಿಸುತ್ತಿದೆ.

ಈ ಕುರಿತು ಒಂದು ವರದಿ : ಅಭಯ್ (೧ ನಿಮಿಷ ೧೦ ಸೆಕೆಂಡ್‌ಗಳು)

ಫಿಲಿಪೈನ್ಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಫರ್ಡಿನಾಂಡ್ ಆರ್. ಮಾರ್ಕೋಸ್ ಅವರ ಮೊದಲ ಭಾರತ ಭೇಟಿ ಇದಾಗಿದೆ. ಈ ಭೇಟಿಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಮಾರ್ಕೋಸ್ ನಡುವೆ ನಾಳೆ ದ್ವಿಪಕ್ಷೀಯ ಮಾತುಕತೆ ನಡೆಯಲಿದೆ.

ಅಧ್ಯಕ್ಷ ಮಾರ್ಕೋಸ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಹ ಭೇಟಿಯಾಗಲಿದ್ದಾರೆ. ನಂತರ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರನ್ನೂ ಭೇಟಿ ಮಾಡುವ ಕಾರ್ಯಕ್ರಮವಿದೆ. ನವದೆಹಲಿಯ ಭೇಟಿಯ ನಂತರ ಮಾರ್ಕೋಸ್ ಅವರು ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ. ಭಾರತ ಮತ್ತು ಫಿಲಿಪೈನ್ಸ್ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಬಂಧಗಳು ೧೯೪೯ ರ ನವೆಂಬರ್‌ನಲ್ಲಿ ಸ್ಥಾಪಿಸಲಾಯಿತು. ವ್ಯಾಪಾರ ಹಾಗೂ ಹೂಡಿಕೆ, ರಕ್ಷಣಾ ಸಹಕಾರ, ಕಡಲ ಸಹಕಾರ, ಕೃಷಿ, ಆರೋಗ್ಯ, ಔಷಧೋಪಚಾರ ಮತ್ತು ಡಿಜಿಟಲ್ ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉಭಯ ದೇಶಗಳು ಬಲಿಷ್ಠ ಸಹಕಾರವನ್ನು ಅಭಿವೃದ್ಧಿಪಡಿಸಿವೆ. ಭಾರತ-ಆಸಿಯನ್ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯ ಹಾಗೂ ದಕ್ಷಿಣ ಏಷ್ಯಾ ಪ್ರಾದೇಶಿಕ ಮಟ್ಟದಲ್ಲಿಯೂ ಉಭಯ ರಾಷ್ಟ್ರಗಳು ಸಕ್ರಿಯವಾಗಿ ತೊಡಗಿಸಿಕೊಂಡಿವೆ. ಫಿಲಿಪೈನ್ಸ್‌ನೊಂದಿಗಿನ ಸಂಬಂಧ ಭಾರತದ ಆಕ್ಟ್ ಈಸ್ಟ್ ನೀತಿ, ಮಹಾಸಾಗರ ದೃಷ್ಟಿಕೋನ ಮತ್ತು ಇಂಡೋ-ಪೆಸಿಫಿಕ್ ದೃಷ್ಟಿಕೋನದ ಪ್ರಮುಖ ಭಾಗವಾಗಿದ್ದು. ಅಧ್ಯಕ್ಷ ಮಾರ್ಕೋಸ್ ಅವರ ಈ ಭೇಟಿ ಭಾರತ-ಫಿಲಿಪೈನ್ಸ್ ರಾಜತಾಂತ್ರಿಕ ಸಂಬಂಧಗಳ ೭೫ನೇ ವಾರ್ಷಿಕೋತ್ಸವವನ್ನೂ ಸಂಭ್ರಮಿಸುತ್ತಿದೆ. ಈ ಭೇಟಿಯು ಭವಿಷ್ಯದ ದ್ವಿಪಕ್ಷೀಯ ಸಹಕಾರಕ್ಕೆ ಮಾರ್ಗಗಳನ್ನು ಅನ್ವೇಷಿಸಲು ಹಾಗೂ ಪ್ರಾದೇಶಿಕ ಮತ್ತು ಜಾಗತಿಕ ಹಿತಾಸಕ್ತಿಯ ವಿಷಯಗಳ ಬಗ್ಗೆ ಚರ್ಚಿಸಲು ಎರಡು ದೇಶಗಳ ನಾಯಕರಿಗೆ ಅವಕಾಶ ಕಲ್ಪಿಸುತ್ತಿದೆ.

<><><><>

ನವದೆಹಲಿಯ ಭಾರತ ಮಂಟಪಂ ನಲ್ಲಿ ಇಂದು ಸಂಜೆ ಇದೇ ಮೊದಲ ಬಾರಿಗೆ ಬಿಮ್‌ಸ್ಟೆಕ್ ಸಾಂಪ್ರದಾಯಿಕ ಸಂಗೀತ ಉತ್ಸವ ನಡೆಯಲಿದೆ. ಈ ಕಾರ್ಯಕ್ರಮವನ್ನು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಭಾರತ, ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ನೇಪಾಳ್, ಶ್ರೀಲಂಕಾ ಮತ್ತು ಥೈಲ್ಯಾಂಡ್‌ನ ಕಲಾವಿದರು ತಮ್ಮ ಸಂಗೀತ ಪ್ರಸ್ತುತಿಗಳನ್ನು ನೀಡಲಿದ್ದಾರೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಸಮಿತಿ ಐಸಿಸಿಆರ್ ಸಪ್ತಸುರ್ : ಏಳು ರಾಷ್ಟ್ರಗಳು ಒಂದು ಸಂಗೀತ ಎಂಬ ಈ ಕಾರ್ಯಕ್ರಮ ಏಳು ಬಿಮ್‌ಸ್ಟೆಕ್ ರಾಷ್ಟ್ರಗಳ ವಿವಿಧ ಸಂಗೀತ ಪದ್ಧತಿಗಳನ್ನು ಸಂಭ್ರಮಿಸಲಿದೆ.

<><><><>

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಎರಡು ಪ್ರತ್ಯೇಕ ಗುರುತಿನ ಚೀಟಿ ಹೊಂದಿದ್ದಾರೆ ಎಂಬ ಆರೋಪದ ನಡುವೆ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರದರ್ಶಿಸಿದ ಗುರುತಿನ ಚೀಟಿಯ ವಿವರಗಳನ್ನು ನೀಡುವಂತೆ ಚುನಾವಣಾ ಆಯೋಗವು ತೇಜಸ್ವಿ ಯಾದವ್ ಅವರಿಗೆ ಸೂಚಿಸಿದೆ. ಪತ್ರಿಕಾಗೋಷ್ಠಿಯಲ್ಲಿ ತೇಜಸ್ವಿ ಯಾದವ್, ಪ್ರದರ್ಶಿಸಿದ ಮತದಾರರ ಗುರುತಿನ ಚೀಟಿಯನ್ನು ಚುನಾವಣಾ ಆಯೋಗ ನೀಡಿಲ್ಲ ಎಂದು ದಿಘಾ ವಿಧಾನಸಭಾ ಕ್ಷೇತ್ರದ ಚುನಾವಣಾ ನೋಂದಣಿ ಅಧಿಕಾರಿ ಹೇಳಿದ್ದರು. ಇದೇ ವೇಳೆ ದಿಘಾ ಕ್ಷೇತ್ರದ ಮತದಾರರ ಕರುಡು ಪಟ್ಟಿಯಲ್ಲಿ ತೇಜಸ್ವಿ ಯಾದವ್ ಅವರ ಹೆಸರು ಇದೆ ಎಂದು ಪಾಟ್ನಾ ಜಿಲ್ಲಾ ಚುನಾವಣಾ ಅಧಿಕಾರಿ ಡಾ. ತ್ಯಾಗರಾಜನ್ ದೃಢಪಡಿಸಿದ್ದಾರೆ. ಇನ್ನೊಂದೆಡೆ, ಎರಡು ಪ್ರತ್ಯೇಕ ಮತದಾರರ ಗುರುತಿನ ಚೀಟಿ ಹೊಂದುವ ಮೂಲಕ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅಕ್ರಮ ಎಸಗಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ನವದೆಹಲಿಯಲ್ಲಿ ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರ, ಈ ಮೂಲಕ ತೇಜಸ್ವಿ ಯಾದವ್, ಚುನಾವಣಾ ಆಯೋಗಕ್ಕೆ ತಪ್ಪು ಸಂಗತಿಗಳನ್ನು ಪ್ರಸ್ತುತ ಪಡಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

ಧ್ವನಿ : ಸಂಬಿತ್ ಪಾತ್ರ (೨೮ ಸೆಕೆಂಡ್‌ಗಳು)

<><><>

ಇಂದಿನಿಂದ ಆರಂಭವಾಗಲಿರುವ ದೆಹಲಿ ವಿಧಾನಸಭಾ ಮುಂಗಾರು ಅಧಿವೇಶನಕ್ಕೂ ಮುನ್ನ, ದೆಹಲಿ ವಿಧಾನಸಭೆ ಕಾಗದರಹಿತವಾಗಿ ವ್ಯವಹರಿಸಲು ಮುಂದಾಗಿದೆ. ಕೇಂದ್ರ ಕಾನೂನು ಮತ್ತು ನ್ಯಾಯ ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ನಿನ್ನೆ ದೆಹಲಿ ವಿಧಾನಸಭಾ ಆವರಣದಲ್ಲಿ ರಾಷ್ಟ್ರೀಯ ಇ-ವಿಧಾನ ಅಪ್ಲಿಕೇಶನ್ ಮತ್ತು ೫೦೦ ಕಿಲೋವ್ಯಾಟ್ ಮೇಲ್ಛಾವಣಿ ಸೌರ ವಿದ್ಯುತ್ ಸ್ಥಾವರವನ್ನು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಉಪಕ್ರಮವು ಭಾರತದಾದ್ಯಂತ ಸುಸ್ಥಿರ ಆಡಳಿತಕ್ಕೆ ಒಂದು ಮಾದರಿಯಾಗಿದೆ ಎಂದು ಶ್ಲಾಘಿಸಿದರು.

<><><>

೨೦೨೫-೨೬ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಭಾರತ ತನ್ನ ಸ್ಮಾರ್ಟ್ ಫೋನ್ ರಫ್ತಿನಲ್ಲಿ ದಾಖಲೆಯ ಏರಿಕೆಯನ್ನು ದಾಖಲಿಸಿದೆ. ಈ ಅವಧಿಯಲ್ಲಿ ಒಟ್ಟು ೭.೭೨ ಶತಕೋಟಿ ಡಾಲರ್ ಮೌಲ್ಯದ ಸ್ಮಾರ್ಟ್ ಫೋನ್‌ಗಳನ್ನು ರಫ್ತು ಮಾಡಲಾಗಿದೆ.

ಇದು ಕಳೆದ ವರ್ಷದ ಇದೇ ಅವಧಿಯ ೪.೯ ಶತಕೋಟಿಗೆ ಹೋಲಿಸಿದರೆ ಶೇಕಡ ೫೮ ರಷ್ಟು ಹೆಚ್ಚಿನ ಪ್ರಮಾಣವಾಗಿದೆ. ವರದಿಗಳ ಪ್ರಕಾರ ಆಪಲ್ ಸಂಸ್ಥೆ ಈ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ತನ್ನ ಗುತ್ತಿಗೆದಾರರ ತಯಾರಕರ ಮೂಲಕ ೬ ಶತಕೋಟಿ ಮೌಲ್ಯದ ಐ-ಫೋನ್‌ಗಳನ್ನು ರಫ್ತು ಮಾಡಿದೆ. ಇದು ಕಳೆದ ವರ್ಷದ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇಕಡ ೮೨ರಷ್ಟು ಹೆಚ್ಚಿನ ಪ್ರಮಾಣವಾಗಿದೆ.

<><><><>

ಭಾರತೀಯ ರಿಸರ್ವ್ ಬ್ಯಾಂಕ್ - ಆರ್‌ಬಿಐ ನ ಹಣಕಾಸು ನೀತಿ ಸಮಿತಿ ಇಂದು ರೆಪೊ ದರ ಕಡಿತದ ಕುರಿತು ನಿರ್ಧಾರ ಕೈಗೊಳ್ಳಲು ತನ್ನ ಮೂರು ದಿನಗಳ ಸಭೆಯನ್ನು ಆರಂಭಿಸಲಿದೆ. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯ ನಿರ್ಣಯವನ್ನು ನಾಡಿದ್ದು, ಬುಧವಾರ ಪ್ರಕಟಿಸಲಾಗುವುದು.

<><><><>

ದೀನ್ ದಯಾಳ್ ಬಂದರು ಪ್ರಾಧಿಕಾರವು ಗುಜರಾತ್‌ನ ಕಾಂಡ್ಲಾದ ಬಂದರು ವಲಯದಲ್ಲಿ ಭಾರತದ ಮೊದಲ ಮೇಕ್ ಇನ್ ಇಂಡಿಯಾ ಹಸಿರು ಹೈಡ್ರೋಜನ್ ಸ್ಥಾವರವನ್ನು ಕಾರ್ಯಾರಂಭಗೊಳಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಿವ್ವಳ ಶೂನ್ಯ ದೃಷ್ಟಿಕೋನದತ್ತ ಇದು ಪ್ರಬಲ ಹೆಜ್ಜೆಯಾಗಿದೆ ಎಂದು ದೀನ್ ದಯಾಳ್ ಬಂದರು ಪ್ರಾಧಿಕಾರ ತಿಳಿಸಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಇದು ಸುಸ್ಥಿರತೆಯನ್ನು ಪ್ರತಿಪಾದಿಸುವ ಮತ್ತು ನಿವ್ವಳ ಶೂನ್ಯ ದೃಷ್ಟಿಕೋನಕ್ಕೆ ಶಕ್ತಿ ತುಂಬುವ ಶ್ಲಾಘನೀಯ ಪ್ರಯತ್ನವಾಗಿದೆ ಎಂದು ಹೇಳಿದ್ದಾರೆ.

<><><><>

ಕೋವಿಡ್ ನಂತರ ಭಾರತದ ಆರ್ಥಿಕ ಶಕ್ತಿ ಮತ್ತು ತಾಂತ್ರಿಕ ಪ್ರಗತಿ ಏರುಗತಿಯಲ್ಲಿ ಸಾಗಿದ್ದು, ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ರಾಷ್ಟ್ರೀಯ ಮಿಷನ್‌ಗೆ ಸೇರಲು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನಾಗರಿಕರಿಗೆ ಕರೆ ನೀಡಿದ್ದಾರೆ.

ಭಾವನಗರದಲ್ಲಿ ವ್ಯಾಪಾರಿಗಳು, ವ್ಯಾಪಾರ ಮುಖಂಡರು ಮತ್ತು ನಾಗರಿಕರೊಂದಿಗೆ ನಡೆದ "ವಿಕಸಿತ ಭಾರತ ಸಂವಾದ" ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಕೋವಿಡ್-೧೯ ರ ನಂತರ ಜಾಗತಿಕ ಆರ್ಥಿಕತೆಗಳ ಬೆಳವಣಿಗೆ ಕುಸಿಯುತ್ತಿರುವಾಗ, ಭಾರತವು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೆಮ್ಮೆಯಿಂದ ನಿಂತಿದೆ ಎಂದು ಹೇಳಿದರು.

<><><><>

ಕಜಕಿಸ್ತಾನದ ಅಲ್ಮಾಟಿಯಲ್ಲಿ ನಡೆದ ಕೊಸನೋವ್ ಸ್ಮಾರಣಾರ್ಥ ಅಥ್ಲಿಟಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಕೇರಳ ಮೂಲದ ಅಬ್ದುಲ್ಲಾ ಅಬುಬಕ್ಕರ್ ಪುರುಷರ ತ್ರಿಪಲ್ ಜಂಪ್ ವಿಭಾಗದ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ. ೧೬.೦೮ ಮೀಟರ್ ಅತ್ಯುತ್ತಮ ಜಿಗಿತ ದಾಖಲಿಸಿ ಅವರು ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>